**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. :85 ಪ್ರಾ.ಸಾ. : 38**

| | |
|---|---|
| ಸಾಕ್ಷಿಯ ಹೆಸರು | : ಗಣಪತಿ ಹನುಮ ಸೋಗೆ |
| ತಂದೆಯ ಹೆಸರು | : ಹನುಮ |
| ವಯಸ್ಸು | : 75 ವರ್ಷ |
| ಉದ್ಯೋಗ | : ರೈತಾಪಿ. |
| ವಾಸ | : ಕಾನಗೋಡು, ಸಿದ್ದಾಪುರ. |

**ದಿನಾಂಕಃ 24-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಹುಟ್ಟಿದಾಗಿನಿಂದ ಕಾನಗೋಡು ಗ್ರಾಮದಲ್ಲಿ ವಾಸ ಇದ್ದೇನೆ. ನನಗೆ ಅಲ್ಲಿ ಸ್ವಂತ ಮನೆ ಇದೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ಪರಿಚಯ ಇದೆ. ಅಂದರೆ ಅವನನ್ನು ಊರಿನಲ್ಲಿ ನೋಡಿದ್ದೇನೆ. ಆರೋಪಿ ಕಾನಗೋಡು ಗ್ರಾಮ ಪಂಚಾಯತಿ ಅಧ್ಯಕ್ಷ ಆಗಿದ್ದ ಎಂಬುದು ನನಗೆ ಗೊತ್ತು. ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿ 2001-02 ನೇ ಸಾಲಿನಲ್ಲಿ ಸರ್ಕಾರದಿಂದ ನಮ್ಮ ಗ್ರಾಮಕ್ಕೆ ರೂ.20 ಲಕ್ಷ ಮಂಜೂರಾಗಿತ್ತು ಮತ್ತು 210 ಫಲಾನುಭವಿಗಳು ಗುರುತಿಸಲ್ಪಟ್ಟಿದ್ದರು ಮತ್ತು ನಾನು ಸಹ ಫಲಾನುಭವಿಗಳ ಪಟ್ಟಿಯಲ್ಲಿ ಫಲಾನುಭವಿ ಆಗಿದ್ದೆ ಎಂಬುದು ನನಗೆ ಗೊತ್ತಿಲ್ಲ. ನನಗೆ ಸಹಾಯಧನ ಎಂದು ರೂ.3000/- ಕೊಟ್ಟಿಲ್ಲ. ನನಗೆ ಯಾವುದೇ ಶೌಚಾಲಯವನ್ನು ಗ್ರಾಮ ಪಂಚಾಯತಿಯಿಂದ ನಿರ್ಮಿಸಿ ಕೊಟ್ಟಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ವಿಶೇಷ ಸರಕಾರಿ ಅಭಿಯೋಜಕರಿಂದಃ-**

2. ನಾನು ದಿನಾಂಕ 11.09.2005 ರಂದು ಕಾರವಾರ ಲೋಕಾಯುಕ್ತ ಆರಕ್ಷಕ ನಿರೀಕ್ಷಕರಿಗೆ ಮೇಲ್ಕಂಡ ಯೋಜನೆ ಅಡಿಯಲ್ಲಿ ರೂ.20 ಲಕ್ಷ ನಮ್ಮ ಗ್ರಾಮಕ್ಕೆ ಮಂಜೂರಾಗಿತ್ತು ಮತ್ತು 210 ಫಲಾನುಭವಿಗಳು ಆಯ್ಕೆ ಆಗಿದ್ದರು ಎಂದು ನನಗೆ ತಿಳಿದು ಬಂತು ಮತ್ತು ನನ್ನ

ಹೆಸರನ್ನು ಆಯ್ಕೆ ಮಾಡಿದ್ದರು ನನಗೆ ಶೌಚಾಲಯ ಕಟ್ಟಿಸಿಕೊಳ್ಳಲು ರೂ.3000/- ಅನ್ನು ಕೊಟ್ಟಿಲ್ಲ ಮತ್ತು ಶೌಚಾಲಯವನ್ನು ಸಹ ಕಟ್ಟಿಸಿಕೊಟ್ಟಿಲ್ಲ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-72 ಎಂದು ಗುರುತಿಸಲಾಯಿತು. ಆರೋಪಿ ನನ್ನ ಊರಿನವನು ಆಗಿದ್ದರಿಂದ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದಃ-**

3. ನಾನು ಸಹಾಯಧನ ರೂ.3000/- ಪಡೆದುಕೊಂಡಿದ್ದರು ಸಹ ಇಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ - ಇಲ್ಲ -**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ